## ಮಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಪತ್ರಕರ್ತರ ಸಂಘದಿಂದ ರಾಷ್ಟ್ರೀಯ ಪತ್ರಿಕಾ ದಿನಾಚರಣೆ

# ನೈತಿಕತೆ ನಿಮ್ಮೊಳಗಿಂದ ಬರಲಿ: ವಿವೇಕ ರೈ

ಪ್ರಜಾವಾಣಿ ವಾರ್ತೆ

**ಮಂಗಳೂರು:** 'ನೈತಿಕತೆಯು ನಮ್ಮೊಳಗಿಂದ ಬರಬೇಕು. ಇತರರಲ್ಲಿ ಹುಡುಕುವುದಲ್ಲ' ಎಂದು ವಿಶ್ರಾಂತ ಕುಲಪತಿ ಪ್ರೊ.ಬಿ.ಎ.ವಿವೇಕ ರೈ ಸಲಹೆ ನೀಡಿದರು.

ದ.ಕ. ಜಿಲ್ಲಾ ಕಾರ್ಯನಿತರ ಪತ್ರಕರ್ತರ ಸಂಘದ ವತಿಯಿಂದ ನಗರದ ಪ್ರೆಸ್‌ಕ್ಲಬ್‌ನಲ್ಲಿ ಸೋಮವಾರ ನಡೆದ 'ರಾಷ್ಟ್ರೀಯ ಪತ್ರಿಕಾ ದಿನಾಚರಣೆ'ಯಲ್ಲಿ ಅವರು ಮಾತನಾಡಿದರು.

'ಯುವ ಪತ್ರಕರ್ತರಲ್ಲಿ ಸಂಶೋಧನೆ, ಓದು ಹೆಚ್ಚಾಗಬೇಕು. ಗ್ರಂಥಾಲಯ ಅಪ್ತವಾಗಬೇಕು. ಸಂಶೋಧನಾತ್ಮಕ ವರದಿಗಳನ್ನು ಬರೆಯಬೇಕು. ಹಿರಿಯರ ಅನುಭವಗಳಿಂದ ಕಲಿಯಬೇಕು. ಈ ವೃತ್ತಿಯಲ್ಲಿ ಸಂಬಂಧಗಳೂ ಮುಖ್ಯವಾಗುತ್ತವೆ' ಎಂದರು.

'ಭಾಷೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿ. ಪ್ರತಿನಿತ್ಯ ಪತ್ರಿಕೆ ಓದಿ' ಎಂದು ವಿದ್ಯಾರ್ಥಿಗಳಿಗೆ ಹಿತವಚನ ಹೇಳಿದರು.

'ಸುದ್ದಿ, ಮಾಹಿತಿ, ಜ್ಞಾನ, ತಿಳಿವಳಿಕೆ ನಡುವಿನ ಅಂತರ ಕಡಿಮೆಯಾಗುತ್ತಿದೆ' ಎಂದರು.

'ಪತ್ರಿಕೆಯಲ್ಲಿ ಸಂಪಾದಕೀಯವೇ ನನ್ನ ಮೊದಲ ಆಯ್ಕೆ. ಟಿ.ಎಸ್. ರಾಮಚಂದ್ರರಾಯರ ಛೂ ಬಾಣವು ನನಗೆ ಇಂದಿಗೂ ನೆನಪಿದೆ. ಅಂದು, ಪತ್ರಿಕಾ ಬರಹಕ್ಕೆ ಮುಖ್ಯಮಂತ್ರಿಯೂ ನಡುಗುತ್ತಿದ್ದರು. ಸಂಪಾದಕೀಯ ಇಲ್ಲದ ಹಾಗೂ ಗಟ್ಟಿ ಇಲ್ಲದ ಪತ್ರಿಕೆಯ 'ಹೃದಯ ಇಲ್ಲದ ವ್ಯಕ್ತಿ'ಯ ಹಾಗೆ' ಎಂದು ವಿಶ್ಲೇಷಿಸಿದರು.

'ಪತ್ರಿಕೆ ಎಂಬುದು ಸಂಕೀರ್ಣ ರಚನೆಯಾಗಿದ್ದು, ವಿವಿಧ ಅಭಿಪ್ರಾಯ- ಸಾಧ್ಯತೆಗಳು ಒಟ್ಟು ಪತ್ರಿಕೆಯನ್ನು ನಿರ್ಧರಿಸುತ್ತವೆ. ಕನ್ನಡ ಪತ್ರಿಕೋದ್ಯಮವು ಆನ್‌ಲೈನ್‌ನಲ್ಲಿ ಇನ್ನಷ್ಟು ವೇಗವಾಗಿ ಅಪ್‌ಡೇಟ್ ಆಗಬೇಕು. ಹವಾಮಾನ್ಯ ವೈಪರೀತ್ಯ, ಪರಿಸರದಲ್ಲಿನ ಬದಲಾವಣೆ, ಜನಜೀವನದ ಬಗೆಗಿನ ಮಾಹಿತಿ ಹೆಚ್ಚಾಗಿ ಬರಬೇಕು' ಎಂದರು.

ಉಜಿರೆ ಎಸ್‌ಡಿಎಂ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ಮುಖ್ಯಸ್ಥ ಭಾಸ್ಕರ ಹೆಗ್ಡೆ ಮಾತನಾಡಿ, 'ಉದ್ಯಮವಾಗಿ ಬದಲಾಗುತ್ತಿರುವ ಪತ್ರಿಕೋದ್ಯಮ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದೆ. ಈ ನಡುವೆಯೂ ಮೌಲ್ಯಗಳನ್ನು ಉಳಿಸಿಕೊಂಡು ಉತ್ತಮ ವರದಿ ನೀಡುವುದು ಪತ್ರಕರ್ತರ ಮುಂದಿರುವ ಸವಾಲಾಗಿದೆ' ಎಂದು ಹೇಳಿದರು.

### 'ಪ್ರಜಾವಾಣಿ' ನಂಟು ನೆನಪಿಸಿದ ರೈ

'ಒಂದು ದಿನ ಅಚ್ಚರಿ ಎನ್ನುವಂತೆ ನಮ್ಮ ಮನೆಗೆ '**ಪ್ರಜಾವಾಣಿ**'ಯ ಎಂ.ಬಿ. ಸಿಂಗ್ ಮತ್ತು ಸೇತೂರಾಂ ಬಂದರು. ತಂದೆಯ ಬಳಿ ಬಂದು, 'ನೀವು ನಮ್ಮ ಅರೆಕಾಲಿಕ ವರದಿಗಾರರು ಆಗಬೇಕು' ಎಂದರು. 'ನಾನು ಎಂಟನೇ ತರಗತಿ ಕಲಿತವನು. 'ಪ್ರಜಾವಾಣಿ' ಯಂತಹ ಪತ್ರಿಕೆಗೆ ಹೇಗೆ ವರದಿ ಕಳುಹಿಸಲಿ?' ಎಂದು ತಂದೆ ಮುಜುಗರ ವ್ಯಕ್ತಪಡಿಸಿದರು. 'ನಿಮ್ಮ ಬರಹ, ಸಾಮಾಜಿಕ ಕೊಡುಗೆಗಳನ್ನು ನೋಡಿಯೇ ನಾವು ಈ ನಿರ್ಧಾರಕ್ಕೆ ಬಂದಿದ್ದೇವೆ' ಎಂದು ನೇಮಕಾತಿ ಮಾಡಿಯೇ ಬಿಟ್ಟರು' ಎಂದು ಪ್ರೊ.ಬಿ.ಎ.ವಿವೇಕ ರೈ ಬಾಲ್ಯದ ದಿನಗಳನ್ನು ನೆನಪಿಸಿಕೊಂಡರು.

'ಆ ಕಾಲದಲ್ಲಿ ಅಂದಿನ ದಿನದ ಪತ್ರಿಕೆ ಅಂದೇ ಸಿಗುವುದೇ ಕಷ್ಟವಾಗಿತ್ತು. ಈ ವಿಚಾರವನ್ನು ತಂದೆಯವರು ನೆಟಕಲ್ಲಪ್ಪ ಗಮನಕ್ಕೆ ತಂದಿದ್ದರು. ತಕ್ಷಣವೇ ಎಲ್ಲ ಅರೆಕಾಲಿಕ ವರದಿಗಾರರಿಗೆ ಪತ್ರಿಕೆ ಕಳುಹಿಸಿಕೊಡಲು ವ್ಯವಸ್ಥೆ ಮಾಡಿದರು. ಹೀಗೆ ಎಂಟನೇ ತರಗತಿಯಿಂದಲೇ ನಾನು '**ಪ್ರಜಾವಾಣಿ**' ಮತ್ತು ಡೆಕ್ಕನ್ ಹೆರಾಲ್ಡ್' ಓದಿಕೊಂಡು ಬೆಳೆದೆನು' ಎಂದರು.

'ಮಂಗಳೂರಿನ ಜನರು ಕೇವಲ ತಮ್ಮ ಸುತ್ತಲಿನ ಸುದ್ದಿ ತಿಳಿದುಕೊಂಡರೆ ಸಾಲದು. ರಾಜ್ಯ ಸುದ್ದಿ ತಿಳಿದುಕೊಳ್ಳಲು ಸಮಗ್ರವಾಗಿರುವ ಪತ್ರಿಕೆ ಓದಬೇಕು. ನಾನು 1960ರಿಂದ 'ಪ್ರಜಾವಾಣಿ' ಓದುತ್ತಿದ್ದೇನೆ. ಈಗಲೂ 8ರಿಂದ 9 ಪತ್ರಿಕೆಗಳನ್ನು ಓದುತ್ತೇನೆ' ಎಂದು ಹೇಳಿದರು.

**ಆಡಳಿತದಲ್ಲಿ ಸಮಸ್ಯೆಗೆ ಒಂದು ಪರಿಹಾರ ಇದ್ದರೆ, ಸಾಹಿತ್ಯ-ಪತ್ರಿಕೋದ್ಯಮದಲ್ಲಿ ಹಲವಾರು ಅವಕಾಶಗಳು ತೆರೆದಿರುತ್ತವೆ. ಅವೆರಡರ ದೃಷ್ಟಿ ಬೇರೆ ಬೇರೆಯೇ...**

**ಪ್ರೊ.ವಿವೇಕ ರೈ,**
ವಿಶ್ರಾಂತ ಕುಲಪತಿ



ಭಾರತೀಯ ಕಾರ್ಯನಿರತರ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ ಅವರನ್ನು ಗೌರವಿಸಲಾಯಿತು

### 'ಒತ್ತಡದ ಮಧ್ಯೆ ಮೌಲ್ಯ ಕಾಪಾಡುವುದೇ ಸವಾಲು'

**ಮಂಗಳೂರು:** 'ಆಧುನಿಕ ಜೀವನದಲ್ಲಿ ವೃತ್ತಿ ಬದುಕಿನ ಒತ್ತಡಗಳ ಮಧ್ಯೆ ಪತ್ರಿಕಾರಂಗದ ಮೌಲ್ಯಗಳನ್ನು ಕಾಪಾಡುವುದೇ ಪ್ರತಕರ್ತರ ನಿಜವಾದ ಸವಾಲು' ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ ಹೇಳಿದರು.

ನಗರದ ಪ್ರೆಸ್‌ಕ್ಲಬ್‌ನಲ್ಲಿ ಸೋಮವಾರ ಆಯೋಜಿಸಿದ್ದ ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಕಳೆದ ನೂರು ವರ್ಷಗಳ ಅವಧಿಯಲ್ಲಿ ಮಾಧ್ಯಮದ ಬೆಳವಣಿಗೆ ವಿಸ್ತಾರವಾಗಿದೆ. ಪ್ರಸಕ್ತ ಕಾಲದಲ್ಲಿ ಹೂಡಿಕೆ ಸ್ಪರ್ಧೆಯ ನಡುವೆ ಮಾಧ್ಯಮಗಳ ಮೇಲೆ ನಿಯಂತ್ರಣ ಕಷ್ಟ ಸಾಧ್ಯ. ಮಾಧ್ಯಮಕ್ಕೆ ಬರುವ ಯುವ ಶಕ್ತಿಯು ಉತ್ಸಾಹದ ಭರದಲ್ಲಿ ಬರವಣಿಗೆಯ, ತಿಳಿವಳಿಕೆಯ ಕೊರತೆ ಕಾಡುತ್ತದೆ. ಹಾಗೆಂದು ಋಣಾತ್ಮಕ ಚಿಂತನೆಯ ಅಗತ್ಯವಿಲ್ಲ. ಕಾಲವೇ ಎಲ್ಲವನ್ನೂ ನಿರ್ಧರಿಸುವುದರಿಂದ ಮಾಧ್ಯಮ ಯಾವುದರಲ್ಲೂ ರಾಜಿಯಾಗದೆ ಮೌಲ್ಯವನ್ನು ಕಾಪಾಡಬೇಕಾಗಿದೆ' ಎಂದರು.

ಸಂಘದ ವತಿಯಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಭಾರತೀಯ ಕಾರ್ಯನಿರತರ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ ಮಾತನಾಡಿ, 'ಪತ್ರಿಕೋದ್ಯಮ ಇಲ್ಲದೇ ದೇಶವನ್ನು ಊಹಿಸಲು ಅಸಾಧ್ಯ. ಪತ್ರಕರ್ತನಾದವನಿಗೆ ಕೆಲಸದಲ್ಲಿ ನಿಷ್ಠೆ, ಬದ್ಧತೆಯಿರಬೇಕಾಗಿದೆ. ಅದೇ ಪತ್ರಿಕಾ ಧರ್ಮದ ಒಳಮರ್ಮ' ಎಂದರು.

ಪ್ರಮುಖರಾದ ಮಂಜುನಾಥ ಭಂಡಾರಿ, ಹರಿಕೃಷ್ಣ ಪುನರೂರು, ಸಂಘದ ಅಧ್ಯಕ್ಷ ಶ್ರೀನಿವಾಸ್ ನಾಯಕ್ ಇಂದಾಜೆ, ಸದಸ್ಯ ವಿಜಯ ಕೋಟ್ಯಾನ್ ಪಡು, ಆರ್.ಸಿ. ಭಟ್, ಇಬ್ರಾಹಿಂ ಅಡ್ಕಸ್ಥಳ ಇದ್ದರು.